ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಎಂ.ಎಂ. ರಾಣಿ, ಶಿಕ್ಷಕರು, ಆಶ್ರಮ ಶಾಲೆ, ಕೋತೂರು, ಇವರ ಪತಿಯ ವೈದ್ಯಕೀಯ ವೆಚ್ಚದ ವೆಚ್ಚ ಮರುಪಾವತಿಸುವ ಬಗ್ಗೆ.

ಓದಲಾಗಿದೆ: 1. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಇವರ ಪತ್ರ ಸಂಖ್ಯೆ: ಪವಕನಿ/ ಸಿಬ್ಬಂದಿ/ಸಿಆರ್-136/2003-04 ದಿ: 25-3-2004

2. ಕರ್ನಾಟಕ ಲೋಕಾಯುಕ್ತ, ಇವರ ಅ.ಸ. ಪತ್ರ ಸಂಖ್ಯೆ compt/LOK/BCD/-375/2007-DRE-I ದಿನಾಂಕ: 25-8-2010 & 20-5-2013

* * *

ಪ್ರಸ್ತಾವನೆ:

ಶ್ರೀಮತಿ ಎಂ.ಎಂ. ರಾಣಿ, ಶಿಕ್ಷಕರು, ಆಶ್ರಮ ಶಾಲೆ, ಕೋತೂರು, ವಿರಾಜಪೇಟೆ ತಾಲ್ಲೂಕು, ಇವರ ಪತಿ ಶ್ರೀ ಎಂ.ಸಿ. ಮೇಧಪ್ಪ, ಇವರು ವಿಕ್ರಮ್ ಆಸ್ಪತ್ರೆ, ಮೈಸೂರು, ಇಲ್ಲಿ ಹೃದಯ ಶಸ್ತ್ರ ಚಿಕಿತ್ಸೆಗಾಗಿ ರೂ.1,47,253.00 ಗಳಷ್ಟು ವೆಚ್ಚವಾಗಿರುತ್ತದೆ. ಸದರಿ ಆಸ್ಪತ್ರೆಯು ಸರ್ಕಾರದ ಮಾನ್ಯತೆ ಪಡೆದಿರುವುರಿಂದ ಹಾಗೂ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಮಡಿಕೇರಿ, ಇವರ ದಿ: 31-8-2004ರ ಪತ್ರದಲ್ಲಿ ವೈದ್ಯಕೀಯ ಚಿಕಿತ್ಸೆ ಮಾಡಿಸಿದ ಬಾಬ್ತು ರೂ.1,20,000-00 ಗಳನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿದ್ದು ಹಾಗೂ ಈ ಬಗ್ಗೆ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಇವರು ಮೇಲೆ ಓದಲಾದ ಕ್ರಮಸಂಖ್ಯೆ (1)ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರಲ್ಲಿನ ಕರ್ನಾಟಕ ಲೋಕಾಯುಕ್ತ, ಇವರ ದಿ: 20-5-2013ರ ಪತ್ರದಲ್ಲಿ ವೈದ್ಯಕೀಯ ಹಾಜರಾತಿ ನಿಯಮಗಳ ಉಪ ನಿಯಮ (2)ರಲ್ಲಿನ ವಿವರಣೆಯು ಸರ್ಕಾರಿ ನೌಕರರ ತಂದೆ/ತಾಯಿ ಹಾಗೂ ಮಲತಾಯಿ, ಇವರಿಗೆ ಮಾತ್ರ ಸಂಬಂಧಿಸಿದ್ದು, ಹಾಗೂ ಸರ್ಕಾರಿ ನೌಕರರ ಪತಿ ಹಾಗೂ ಪತ್ನಿ ಪ್ರಕರಣದಲ್ಲಿ ಅನ್ವಯವಾಗುವುದಿಲ್ಲವಾದ್ದರಿಂದ ಕರ್ನಾಟಕ ಲೋಕಾಯುಕ್ತ, ಕಾಯ್ದೆ 12(1) ರಡಿಯಲ್ಲಿ ನೀಡಿರುವ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿ, ವರದಿ ನೀಡುವಂತೆ ಸೂಚಿಸಿರುತ್ತಾರೆ.

ಶ್ರೀಮತಿ ಎಂ.ಎಂ. ರಾಣಿ, ಶಿಕ್ಷಕರು, ಆಶ್ರಮ ಶಾಲೆ, ಕೋತೂರು, ವಿರಾಜಪೇಟೆ ತಾಲ್ಲೂಕು, ಇವರ ಪತಿ ಶ್ರೀ ಎಂ.ಸಿ. ಮೇಧಪ್ಪ, ಇವರ ಹೃದಯ ಶಸ್ತ್ರ ಚಿಕಿತ್ಸೆಗಾಗಿ ಆದ ವೆಚ್ಚವನ್ನು ಮರುಪಾವತಿಸುವ ಕುರಿತು ಸಲ್ಲಿಸಿದ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಕಇ 110 ಪವಯೋ 2013 ಬೆಂಗಳೂರು, ದಿನಾಂಕ: 03-12-2013**

ಶ್ರೀಮತಿ ಎಂ.ಎಂ. ರಾಣಿ, ಶಿಕ್ಷಕರು, ಆಶ್ರಮ ಶಾಲೆ, ಕೋತೂರು, ವಿರಾಜಪೇಟೆ ತಾಲ್ಲೂಕು, ಇವರ ಪತಿ ಶ್ರೀ ಎಂ.ಸಿ. ಮೇಧಪ್ಪ, ಇವರು ತಮ್ಮ ಪತಿಯ ಹೃದಯ ಶಸ್ತ್ರ ಚಿಕಿತ್ಸೆಗೆ ತಗುಲಿದ ಒಟ್ಟು ವೆಚ್ಚ ರೂ.1,47,253.00 ಗಳಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಕೊಡಗು ಜಿಲ್ಲೆ, ಇವರು ದಿ: 31-8-2004ರ ಪತ್ರದಲ್ಲಿ ತಿಳಿಸಿದ ಅರ್ಹತಾ ಮೊತ್ತ ರೂ.1,20,000.00 (ರೂ. ಒಂದು ಲಕ್ಷ ಇಪ್ಪತ್ತು ಸಾವಿರಗಳು ಮಾತ್ರ) ಗಳನ್ನು

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 31ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸದರಿ ನಿಯಮಾವಳಿ ನಿಯಮ 14ನ್ನು ಸಡಿಲಿಸಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಮರುಪಾವತಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಶ್ರೀಮತಿ ಎಂ.ಎಂ. ರಾಣಿ, ಶಿಕ್ಷಕರು, ಆಶ್ರಮ ಶಾಲೆ, ಕೋತೂರು, ವಿರಾಜಪೇಟೆ ತಾಲ್ಲೂಕು, ಇವರ ಪತಿ ಶ್ರೀ ಎಂ.ಸಿ. ಮೇಧಪ್ಪ, ಇವರ ವೈದ್ಯಕೀಯ ಚಿಕಿತ್ಸೆಗೆ ಸಂಬಂಧಿಸಿದ ಬಿಲ್ಲುಗಳನ್ನು ಸಲ್ಲಿಸುವಲ್ಲಿ ಉಂಟಾಗಿರುವ ವಿಳಂಬವನ್ನು ಕರ್ನಾಟಕ ಆರ್ಥಿಕ ಸಂಹಿತೆ (1958) ಅನುಚ್ಛೇದ (ನಿಯಮ) 146ಎ(II) ರನ್ವಯ ವಿಳಂಬ ಮನ್ನಾ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಇವರ ಟಿಪ್ಪಣಿ: ಸಿಆಸುಇ 181 ಸೇನಿಎಫ್ 2013 ದಿನಾಂಕ: 23-11-2013ರಲ್ಲಿ ನೀಡಿರುವ ಅಭಿಪ್ರಾಯದೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಎಂ ಜಯಮಣಿ)
ಸರ್ಕಾರದ ಅಧೀನ ಕಾರ್ಯದರ್ಶಿ-2(ಪ್ರ)
ಸಮಾಜ ಕಲ್ಯಾಣ ಇಲಾಖೆ

ಇವರಿಗೆ:-

1. ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1 ಮತ್ತು ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2. ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕೃಷಿಭವನ, ಬೆಂಗಳೂರು. (ಇದರೊಂದಿಗೆ ಸದರಿ ನೌಕರರ ಮೂಲ ಬಿಲ್ಲುಗಳನ್ನು ಲಗತ್ತಿಸಿ ಕಳುಹಿಸಲಾಗಿದೆ).
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
5. ಸರ್ಕಾರದ ಉಪ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಸೇವಾ ನಿಯಮಗಳು)
6. ಸರ್ಕಾರದ ಉಪ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
7. ಶ್ರೀಮತಿ ಎಂ.ಎಂ. ರಾಣಿ, ನಿವೃತ್ತ ಆಶ್ರಮ ಶಾಲೆ ಶಿಕ್ಷಕರು, ಕೋಂ ಶ್ರೀ ಮೇಧಪ್ಪ, ಕಾನೂರು ಗ್ರಾಮ ಮತ್ತು ಅಂಚೆ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.
8. ಶಾಖಾ ರಕ್ಷ ಕಡತ.
9. ಹೆಚ್ಚುವರಿ ಪ್ರತಿ-03.